ತಾವು ಕೊಟ್ಟ ಜಾಹೀರಾತನ್ನೆ ಎರಡು ಮೂರು ಸಾರಿ ಓದಿಕೊಂಡ ಶ್ರೀಗಳು ಇದು ಪತ್ರಿಕೆಯಲ್ಲಿ ಪ್ರಕಟವಾಗುವುದಕ್ಕೆ ಮುಂಚೆ ಇದ್ದ ಕಾನ್ಫಿಡೆನ್ಸ್‌ನಲ್ಲಿ ಒಂದಂಶ ಕರಗಿದಂತಾಗಿ ಸಣ್ಣಗೆ ಬೆವರುತ್ತಿದ್ದರು.

ಸ್ವಾಮೀಜಿಯವರಿಗೆ ಈ ಐಡಿಯಾ ಏಕಾಏಕಿ ಬಂದದ್ದಲ್ಲ. ತನ್ನೊಂದಿಗೆ ಸುಮಾರು ಹದಿನೈದು ವರ್ಷಗಳ ಹಿಂದೆ ಮರಿಸ್ವಾಮಿಯಾಗಿ ಈಗಿನ ಹಿರಿಯ ಸ್ವಾಮಿಗಳ ಬಳಿ ಸೇರಿಕೊಂಡು ಕಠಿಣ ಅಭ್ಯಾಸದಲ್ಲಿ ನಿರತರಾಗಿದ್ದ ಹುಬ್ಬಳ್ಳಿ ಮೂಲದ ಶಾಂತ ಸ್ವಾಮಿಗಳ ಸಂಪರ್ಕವೇರ್ಪಟ್ಟಮೇಲೆ ಬಂದದ್ದು. ಕಳೆದ ಆರುತಿಂಗಳ ಹಿಂದೆ ನಡೆದ ಒಂದು ಧಾರ್ಮಿಕ ಸಮ್ಮೇಳನದಲ್ಲಿ ಭೇಟಿಯಾಗಿದ್ದ ಶಾಂತ ಸ್ವಾಮಿಗಳು ತಮ್ಮೊಂದಿಗೆ ಒಬ್ಬ ಮಹಿಳೆಯನ್ನು ಕಾರಿನ ಹಿಂದಿನ ಸೀಟಿನಲ್ಲಿ ಕೂರಿಸಿಕೊಂಡಿದ್ದನ್ನು ಇವರು ಕಂಡಿದ್ದರು. ಶಾಂತ ಸ್ವಾಮಿಗಳೊಂದಿಗೆ ತೀರ ಅನ್ಯೋನ್ಯ ಗೆಳೆತನ ಹೊಂದಿದ್ದ ಕಿರಿಯ ಶ್ರೀಗಳು 'ಯಾರಾಕೆ' ಎಂದು ಕೇಳಿದ್ದಕ್ಕೆ ನಮ್ಮ ಡಿಟಿಪಿ ಆಪರೇಟರ್ ಎಂದು ಸಹಜವಾಗಿ ಹೇಳಿ, ಸಮ್ಮೇಳನದಲ್ಲಿ ವಿಷಯ ಮಂಡಿಸಬೇಕಲ್ಲ, ವಿಚಾರವೆಂಬುದು ನಿಂತ ನೀರಾಗಿರದೆ ಮತ್ತೆಮತ್ತೆ ಪರಿಷ್ಕರಣೆಗೆ ಒಳಗಾಗುತ್ತಲಿರಬೇಕಾಗುತ್ತೆ, ಆದ್ದರಿಂದ ಡಿಟಿಪಿ ಆಪರೇಟರ್‌ನ ಪಕ್ಕದಲ್ಲೆ ಇಟ್ಟುಕೊಂಡಿದ್ದರೆ ವೇದಿಕೆಯಲ್ಲಿನ ಮುಜುಗರದಿಂದ ತಪ್ಪಿಸಿಕೊಳ್ಳಬಹುದೆಂಬ ಜಾಣ್ಮೆಯನ್ನ ಮೆರೆದಿದ್ದರು.

ಗಂಟಲೊಳಗೆ ನೀರೆಳೆದುಕೊಂಡ ಕಿರಿಯ ಶ್ರೀಗಳು ತುಟಿಗೆ ದಾಳಿಂಬೆಯಂತಹ ಲಿಪ್‌ಸ್ಟಿಕ್ ಬಳಿದುಕೊಂಡಿರುವ ಆಕೆಯನ್ನೆ ಇನ್ನೊಮ್ಮೆ ಮತ್ತೊಮ್ಮೆ ನೋಡಿದ್ದರು. ಮೂರು ದಿನದ ಆ ಸಮ್ಮೇಳನದಲ್ಲಿ ಒಂದೇ ಕಡೆ ಓದಿ ಕಲಿತಿದ್ದ ಈ ಇಬ್ಬರು ಸ್ವಾಮಿಗಳು ತಂಗಲು ಪ್ರತ್ಯೇಕ ಕೊಠಡಿಗಳನ್ನು ಪಡೆದಿದ್ದರು. ಎರಡನೇ ದಿನದ ಮಧ್ಯಾಹ್ನದ ಗೋಷ್ಠಿಯಲ್ಲಿ ಶಾಂತ ಸ್ವಾಮಿಗಳ ಭಾಷಣವಿದ್ದುದರಿಂದ ಮಿತ್ರ ಸ್ವಾಮಿಗಳಿಗೆ, 'ನೀವು ಹೋಗಿರಿ, ನಾನೊಂದಿಷ್ಟು ತಯಾರಿ ನಡೆಸಿ ಬರುತ್ತೇನೆ' ಎಂದು ಹೇಳಿ ಬೀಳ್ಕೊಟ್ಟಿದ್ದರು. ಮಧ್ಯಾಹ್ನ ಒಂದರ ಸುಮಾರಿಗೆ ಕಿರಿಯ ಶ್ರೀಗಳು ಜಲಬಾಧೆ ನಿಮಿತ್ತ ತಾವು ತಂಗಿದ್ದ ಕೊಠಡಿಯತ್ತ ಬಂದಿದ್ದರು. ಬಾಗಿಲು ಹಾಕೇ ಇತ್ತು. ಸೌಮ್ಯ ಸ್ವಭಾವದ ಶ್ರೀಗಳು ಒಂದೆರೆಡು ಬಾರಿ ಬಾಗಿಲು ತಟ್ಟಿ, ಯಾರೂ ತೆಗೆಯದೆ ಇದ್ದಾಗ ಗೆಳೆಯ ವಿಶ್ರಾಂತಿಯಲ್ಲಿರಬೇಕೆಂದು ಬಗೆದು ಅನತಿ ದೂರದಲ್ಲಿದ್ದ ಇನ್ನೊಂದು ಶೌಚಾಲಯವನ್ನೆ ಬಳಸೋಣವೆಂದು ಹೋಗಿ ಬಾಗಿಲು ಹಾಕಿಕೊಂಡರು. ಯಾವುದೋ ಸದ್ದಾದ ಪ್ರಯುಕ್ತ ಕೂತಲ್ಲಿಂದಲೆ ಮೇಲೆದ್ದು ಮೇಲ್ಗಡೆ ಕಾಣುತ್ತಿದ್ದ ಬಾಗಿಲ ಗ್ಯಾಪಿನಲ್ಲಿ ಕಣ್ಣಾಯಿಸಿದರು. ಶಾಂತ ಸ್ವಾಮಿಗಳು ಕರೆತಂದಿದ್ದ ಮಹಿಳಾ ಡಿಟಿಪಿ ಕೊಠಡಿಯಿಂದ ಹೊರಬಂದು ಅವಸರವಸರದಿ ಕಾಲ್ಕಿತ್ತು ಬಿಟ್ಟಿತು. ಕಿರಿಯ ಶ್ರೀಗಳು ಒಂದಕ್ಕೆಂದು ಬಂದವರು ಎಲ್ಡಕ್ಕೆಂಬಂತೆ ಅಲ್ಲೆ ಕೂತು ದಿಗ್ಭ್ರಾಂತರಾದರು. ಅಂದು ವೇದಿಕೆಯಲ್ಲಿ ಕಾಮನಿಗ್ರಹದ ಬಗ್ಗೆ ಶಾಂತ ಸ್ವಾಮಿಗಳು ಮಂಡಿಸಿದ ಭಾಷಣ ಎಲ್ಲರಿಂದ ಮೆಚ್ಚುಗೆಗೆ ಪಾತ್ರವಾಗಿತ್ತು.

ಇದಾದಂದಿನಿಂದಲೇ ಕಿರಿಯ ಶ್ರೀಗಳಿಗೆ ಈ ಥರಹದ ಬಯಕೆ ಶುರುವಾಯಿತೆಂದು ಕ್ಷುಲ್ಲಕವಾಗಿ ಯೋಚಿಸುವಂತಿಲ್ಲ. ತಾವು ಪ್ರೌಢಾವಸ್ಥೆಯಲ್ಲಿದ್ದು ಹಳ್ಳಿಯ ಶಾಲೆಯಲ್ಲಿ ಓದುತ್ತಿದ್ದಾಗ, ತನ್ನೂರ ಹುಡುಗಿಯರೊಂದಿಗೆ ಶಾಲೆಗೋಗಿ ಬರುವ ಮಾರ್ಗ ಮಧ್ಯದಲ್ಲಿ ಸಿಗುವ ಹೊಂಗೆ ಸೊಂಪಲಿಗೆ ಮಿತ್ರೆಯೊಬ್ಬಳನ್ನು ಕೈಹಿಡಿದು ಎಳೆದೊಯ್ದಿದ್ದರು. ಬಾಲಕಿ ಕೈಕಾಲು ಕಿತ್ತುಕೊಂಡು ಅಳುತ್ತ ಓಡಿ ಹೋಗಿ ಅಪ್ಪ ಅಮ್ಮನಿಗೆ ತಿಳಿಸಲಾಗಿ, ಅವರು ಬಂದು ಕ್ಲಾಸ್ ಟೀಚರ್ ಕೆಂಚಪ್ಪನರಿಗೆ ಮುಟ್ಟಿಸಿದ ಪ್ರಯುಕ್ತ, ಕೆಂಚಪ್ಪನವರು ಅಂದೇ ಡೆಸ್ಕಿನ ಸಂದಿಗಾಕಿ ಮಕಕ್ಕೆ ತದುಕಿದ್ದರು. ಈಗ ವೃತ್ತಿಯಿಂದ ನಿವೃತ್ತರಾಗಿರುವ ಕೆಂಚಪ್ಪನವರು ಶ್ರೀಮಠದ ಭಕ್ತರೂ ಆಗಿದ್ದು, ಆಗೊಮ್ಮೆ ಈಗೊಮ್ಮೆ ಬಂದು ಕಿರಿಯ ಶ್ರೀಗಳ ಕಾಲಿಗೆರಗುವುದೂ ಉಂಟು. ಆಗೆಲ್ಲ ಕಿರಿಯ ಶ್ರೀಗಳಿಗೆ ಕ್ಲಾಸ್ ಟೀಚರ್ ಕೆಂಚಪ್ಪನವರೇ ಕಣ್ಣೆದುರಿಗೆ ಬಂದಂತಾಗಿ ಮೆಲ್ಲಗೆ ಬೆವರುತ್ತಾರೆ.

ಈ ನಡುವೆ ಹಿರಿಯ ಸ್ವಾಮಿಗಳ ಕಣ್ಣಿಗೆ ಬಿದ್ದು, ಬದುಕಲ್ಲಿ ಸಂಭವಿಸಿದ ಆಕಸ್ಮಿಕ ಘಟನೆಗಳೂ